# ಕೆಲವು ಶಕುನಗಳು

ನಮ್ಮಲ್ಲಿ ಶಕುನಗಳನ್ನು ನಂಬುವುದು ಅನಾದಿ ಕಾಲದಿಂದಲೂ ಬೇರೂರಿರುವ ಪದ್ಧತಿ. ಕೆಲವು ಪ್ರಾಣಿಗಳು, ಪಕ್ಷಿಗಳು ಹಾಗೂ ವಸ್ತುಗಳನ್ನು ಮತ್ತು ವ್ಯಕ್ತಿಗಳನ್ನು ನೋಡುವುದು ಶುಭಕರವೆಂದೂ, ಇನ್ನು ಕೆಲವನ್ನು ನೋಡುವುದು ಅಶುಭವೆಂದೂ ನಮ್ಮಲ್ಲಿ ಅಭಿಪ್ರಾಯಗಳು ಮೂಡಿಬಿಟ್ಟಿವೆ. ಬನ್ನಿ, ಕೆಲವು ಶಕುನ, ಅಪಶಕುನಗಳ ಸ್ಥೂಲ ವಿಶ್ಲೇಷಣೆಯತ್ತ ಗಮನ ಹರಿಸೋಣ;

**1. ಸುವಾಸಿನಿಯರು, ವಾರಾಂಗನೆಯರು ಎದುರಾದರೆ ಶುಭ:** ಪುರುಷರಿಗೆ ಹೆಣ್ಣಿನ ಆಕರ್ಷಣೆ ಇಂದು ನಿನ್ನೆಯದಲ್ಲ. ಮನೆಯಿಂದ ಹೊರಟಾಗ ಅಲಂಕೃತ ಹೆಣ್ಣು, ಆಕೆ ಗೃಹಿಣಿಯೇ ಇರಲಿ, ವಾರಾಂಗನೆಯೇ ಇರಲಿ, ಎದುರು ಬಂದಾಗ ಗಂಡಿನ ಮನಸ್ಸು ಸಾಮಾನ್ಯವಾಗಿ ಮತ್ತು ಸಹಜವಾಗಿ ಅರಳುತ್ತದೆ. ಆದ್ದರಿಂದ ಮನೆಯಿಂದ ಹೊರಟಾಗ ಹೆಣ್ಣನ್ನು ಬರಮಾಡಿಕೊಂಡೇ ಕೆಲವರು ಪ್ರಯಾಣಕ್ಕೆ ಹೊರಡುತ್ತಿದ್ದರು. ಪ್ರಫುಲ್ಲ ಮನ ಫಲಿತಾಂಶಕರ ಕೆಲಸಕ್ಕೆ ಪೂರಕವಾಗುತ್ತದೆ ಎಂಬುದಕ್ಕೆ ಈ ಶಕುನ ಒಂದು ಉದಾಹರಣೆ.

**2. ಬೆಕ್ಕು ಎದುರಾದರೆ ಅಶುಭ:** ಬೆಕ್ಕು ದಾರಿಗೆ ಅಡ್ಡ ಬಂದರೆ ಏಕೆ ಅಶುಭ ಎನ್ನುತ್ತಿದ್ದರು ಎನ್ನುವುದನ್ನು ಈ ಅಂಕಣದಲ್ಲಿ ಬರೆಯಲಾಗಿತ್ತು. ಅಡ್ಡ ಬಂದರೆ ಅಪಾಯ ಎಂಬುವ ಅಂಶ ಅಗತ್ಯಕ್ಕಿಂತಲೂ ಹೆಚ್ಚಿನ ವಿಕೋಪಕ್ಕೆ ತಲುಪಿ ಬೆಕ್ಕನ್ನು ಕಾಣುವುದೇ ಅಪಶಕುನ ಎಂಬ ವಿಚಿತ್ರ ನಂಬಿಕೆ ಮೂಡಿಬಂದಿತು. ಆದರೆ ಕೆಲವು ವಿದೇಶಿ ಸ್ಥಳಗಳಲ್ಲಿ ಕಪ್ಪುಬೆಕ್ಕು ಶುಭ ಎಂಬ ನಂಬಿಕೆಯೂ ಇದೆ.

**3. ಬೊಂಬು, ಗಳ, ಏಣಿಗಳನ್ನು ಹೊತ್ತವರನ್ನು ನೋಡಬಾರದು:** ಭುಜದ ಮೇಲೆ ಬೊಂಬು ಹೊತ್ತವರನ್ನು ನೋಡಿದಾಕ್ಷಣ ಮನಕ್ಕೆ ಸಾವಿನ ಚಿತ್ರಣ ಮೂಡುವುದು ಅಂದಿನ ದಿನಗಳಲ್ಲಿ ಸಹಜವಾಗಿದ್ದಿತು. ಕಡೆಯ ಸವಾರಿಗೆ ಅಗತ್ಯವಾದ ಬೊಂಬು, ಗಳ ನೋಡಿದ ಕೆಲವರಲ್ಲಿ ಮನಸ್ಸು ಪ್ರಕ್ಷುಬ್ಧಗೊಳ್ಳುತ್ತಿದ್ದಿತು. ಏಣಿಯಂತೂ ಚಟ್ಟವೆಂದೇ ಭಾಸವಾಗುತ್ತಿತ್ತು! ಪ್ಲೇಗ್, ಮಲೇರಿಯಾಗಳಿಂದ ಹಳ್ಳಿಗಳೇ ಹಾಳಾದ ಕಾಲದಲ್ಲಿ ಬೊಂಬನ್ನು, ಮಲಗಿಸಿದಂತಹ ಸ್ಥಿತಿಯಲ್ಲಿದ್ದ (horizontal) ಏಣಿಯನ್ನು ಕಂಡರೆ ಬೆಚ್ಚಿಬೀಳುವ ಹಂತಕ್ಕೆ ಮಾನವ ತಲುಪಿದ್ದಾಗ ಪ್ರಾಯಶಃ ಬೊಂಬು, ಗಳ, ಏಣಿಗಳು ಅಪಶಕುನದ ಪಟ್ಟಿಯನ್ನು ಸೇರಿರಬೇಕು. ಈಗಿನ ದಿನಗಳಲ್ಲೂ ಕೆಲವರು ಈ ವಿಷಯದ ಎಕ್ಸ್‌ಟೆನ್ಷನ್ ಅಳವಡಿಸಿಕೊಂಡು ಎದುರಿಗೆ ಶವ ಕೊಂಡೊಯ್ಯುವ ವ್ಯಾನ್ ಅಥವಾ ಅಪರಕರ್ಮದ ವ್ಯಾನ್ ಬಂದರೆ ತಮ್ಮ ಶುಭಕಾರ್ಯಕ್ಕೆ ಹೊರಡುವ ಸಮಯವನ್ನು ಮುಂದಕ್ಕೆ ಹಾಕುತ್ತಾರೆ. ಅದೇಕೋ ಸ್ಟ್ರೆಚರ್ ಮತ್ತು ನರ್ಸಿಂಗ್ ಹೋಂಗಳ ಮಾಲಿಕರನ್ನು ಕಂಡರೆ ಅಪಶಕುನ ಎಂಬ ಭಾವ ಇನ್ನೂ ಅವರಲ್ಲಿ ಮೂಡಿಲ್ಲ!

**4. ವಿಧವೆಯರನ್ನು ಕಾಣುವುದು ಅಶುಭ;** ಇದು ಸಹ ಮನೋವಿಜ್ಞಾನಕ್ಕೆ ಸಂಬಂಧಿಸಿದುದು. ಬೆಳಗ್ಗೆ ಎದ್ದು ಹೊರಬಂದಾಗ ನಗೆಮೊಗ ಕಂಡರೆ ಉಲ್ಲಾಸ, ದುಃಖದ ಮೊಗವನ್ನು ಕಂಡಾಗ ಮನ ಮುದುಡುವುದು ತಿಳಿದ ಸಂಗತಿಯೇ. ಆಗಿನ ದಿನಗಳಲ್ಲಿ ವಿಧವೆಯರು ಪರಾವಲಂಬಿಗಳಾಗಿಯೇ ಇರಬೇಕಾಗಿದ್ದು, ಸಂತೋಷ ಅವರ ಬಳಿ ಸುಳಿಯಲೂ ಆಗದ ಸಾಮಾಜಿಕ ಪರಿಸ್ಥಿತಿ ಇದ್ದುದರಿಂದ, ದುಃಖಕ್ಕೆ ಒಳಗಾದ ಆ ಮುಖವನ್ನು ಕಾಣುವುದು ಅಯಿಷ್ಟವಾಗಿ, ಅನಿಷ್ಟ ಎಂದು ಸಾರಿದರು. ಕಳೆದ ಹಲವಾರು ದಶಕಗಳಿಂದ ವಿಧವೆಯರೇ ನಮ್ಮ ದೇಶವನ್ನು ಆಳಿದುದು ಮತ್ತು ಆಳುತ್ತಿರುವುದು ವಿಧವೆಯರಿಗೆ ನಮ್ಮ ಸಮಾಜ ಉನ್ನತ ಮಟ್ಟ ನೀಡಿದುದರ ಕುರುಹಾಗಿದೆ. ಇಂದು, ಯಾವುದಾದರೂ ವಿಶೇಷ ಸಂದರ್ಭಗಳಲ್ಲಿ, ಕೆಲವು ಸಂಪ್ರದಾಯಶರಣ, ಚಿಂತನಹೀನ ವ್ಯಕ್ತಿಗಳು ಮಾತ್ರ ವಿಧವೆಯನ್ನು ಕಂಡರೆ ಮುಖ ಸಿಂಡರಿಸುವರೇ ವಿನಹ, ಆಗಿನಂತೆ ಅವಲಕ್ಷಣಕ್ಕೊಳಗಾದ ವಿಧವೆ ಈಗ ಬೆಳಗಾಗಿ ಎದುರಿಗೆ ಬರುವುದು, ಬಯಸತಕ್ಕ ವಿಷಯವಲ್ಲವಾದರೂ, ವರ್ಜ್ಯವೆಂಬ ಭಾವವಂತೂ ಸಾಕಷ್ಟು ದೂರವಾಗಿದೆ. ಅವರೂ ನಮ್ಮಂತೆಯೇ ಭಾವನೆಗಳನ್ನು, ಚೈತನ್ಯವನ್ನು, ಹೊಂದಿರುವಾಗ ಈ ತಾರತಮ್ಯವನ್ನು ಹತ್ತಿಕ್ಕುವುದು ನಮ್ಮ ಸಮಾಜದ ಕರ್ತವ್ಯವೂ ಹೌದು.

**5. ಒಂಟಿ ಬ್ರಾಹ್ಮಣನನ್ನು ಕಾಣುವುದು ಅಶುಭ:** ಅಂದಿನ ದಿನಗಳಲ್ಲಿ ಯಾವುದೇ ಶುಭಸಮಾಚಾರವನ್ನು ಹಂಚಬೇಕಾದರೆ ಕಡಿಮೆಯೆಂದರೆ ಇಬ್ಬರು ಬ್ರಾಹ್ಮಣರು ಹೋಗುತ್ತಿದ್ದರು (ಮೂವರು ಮಾತ್ರ ಹೋಗುತ್ತಿರಲಿಲ್ಲ, ಅದರ ಬಗ್ಗೆ ಚರ್ಚೆಯನ್ನು ಇನ್ನೊಮ್ಮೆ ಕೈಗೆತ್ತಿಕೊಳ್ಳೋಣ), ಯಾವುದೇ ಮುಂಜಿ, ಮದುವೆ,



ಸಮಾರಂಭಗಳಿಗೆ ಆಹ್ವಾನಪತ್ರಿಕೆ ಕೊಡಬೇಕಾದರೆ ದಂಪತಿ ಅಥವಾ ಒಂದು ಹೆಣ್ಣು, ಒಂದು ಗಂಡು ಜೋಡಿಯಾಗಿಯೇ ಹೋಗಿ ಕರೆಯುವುದು ಕ್ರಮವಾಗಿದ್ದಿತು. ಆದರೆ ಸಾವಿನಂತಹ ಸುದ್ದಿಯನ್ನು ಅಥವಾ ಇನ್ನಾವುದೇ ಅಶುಭ ಸುದ್ದಿಯನ್ನು ತಿಳಿಸಬೇಕಾದರೆ ಒಬ್ಬನೇ ಬ್ರಾಹ್ಮಣ ಹೊರಬೀಳುವುದು ಪದ್ಧತಿಯಲ್ಲಿದ್ದಿತು. ಈಗಲೂ, ಬೆಳಗ್ಗೆ ಏಳರ ಒಳಗೆ, ಅಪರೂಪಕ್ಕೆ ಕಾಣುವ ಬ್ರಾಹ್ಮಣನೊಬ್ಬ ಮನೆಯ ಮುಂದೆ ಕಾಣಿಸಿಕೊಂಡನೆಂದರೆ ಯಾವುದೋ ಸಾವಿನ ಸುದ್ದಿ ಇದೆ ಎಂದೇ ಅರ್ಥ, ಟೆಲಿಫೋನ್, ಸೆಲ್‌ಫೋನ್, ಇಂಟರ್ನೆಟ್ ಇರುವ ಈ ಕಾಲದಲ್ಲಿ ಒಂಟಿ ಬ್ರಾಹ್ಮಣನೇ ಸಾವಿನ ದೂತನಲ್ಲವಾದ್ದರಿಂದ ಇಂದಿಗೆ ಅಂತಹ ನಂಬಿಕೆ ಅಪ್ರಸ್ತುತ. ಅಲ್ಲದೆ, ಕಾಲ ಬದಲಾದಂತೆ, ಪರಿಸ್ಥಿತಿಗೆ ಅನುಗುಣವಾಗಿ ಒಬ್ಬನೇ ಬ್ರಾಹ್ಮಣ ಆಹ್ವಾನ ಪತ್ರಿಕೆ ನೀಡುವುದು ಸಹ ಜಾರಿಗೆ ಬಂದು, ಅಂಗೀಕೃತ ರೀತಿಯಾಗಿರುವ ಈ ಕಾಲದಲ್ಲಿ ಒಂಟಿ ಬ್ರಾಹ್ಮಣ ಅಶುಭ ಎಂಬುದು ಅಪ್ರಸ್ತುತ.

ತಿದ್ದುಪಡಿ: ಭೂತವಲ್ಲವದು, ಸ್ಕಿಝೋಫ್ರೇನಿಯಾ ಲೇಖನದಲ್ಲಿ ವ್ಯಕ್ತಿಯು ವಿವಿಧ ವ್ಯಕ್ತಿತ್ವಗಳನ್ನು ಧರಿಸುವುದಕ್ಕೆ ಮಲ್ಟಿಪಲ್ ಪರ್ಸನಾಲಿಟಿ ಡಿಸಾರ್ಡರ್ ಅಥವಾ ಎಂಪಿಡಿ ಎಂದಿರಬೇಕಿತ್ತು. ಮಾನಸಿಕ ಕ್ಷೋಭೆಯಿಂದ ಒಳಗಾಗುವ ಮಾನಸಿಕ ಅಸಮತೋಲನಕ್ಕೆ ಸ್ಕಿಝೋಫ್ರೇನಿಯಾ ಎನ್ನುತ್ತಾರೆ.

ವೈ–ಚಾರಿ